ಲೆಕ್ಕಹಾಕಿದೆವು.'

'ಏಯ್... ಸತ್ತೋಗಿರೋಲಮ್ಮ.'

ಅವನು ಹೊಸದೊಂದು ಸಿಲ್ಕ್ ಷರ್ಟು, ಮುಂಡು ಧರಿಸಿ ಆ ಮನೆಗೆ ಹೋದ. ಹೊತ್ತು ಸಂಜೆಯಾಗಿತ್ತು. ಸಂಜೆಯ ಕತ್ತಲಲ್ಲಿ ಆ ಮನೆ, ಮುದುಡಿ ಮಲಗಿರುವ ಕಪ್ಪು ನಾಯಿಯಂತಿತ್ತು. ಮೊಗಸಾಲೆಯಲ್ಲಿ ದೀಪವಿರಲಿಲ್ಲ. ಅವನು ತುಂಬಾ ಹೊತ್ತು ಬಾಗಿಲು ಬಡಿದ. ಕೊನೆಗೆ ಬಾಗಿಲು ತೆರೆದ. ಮುದಿ ಕೆಲಸಗಾರ ಕೇಳಿದ,

'ಏನು ವಿಷಯ?'

'ನಾನು ಸುವರ್ಣಾಳನ್ನು ಕಾಣಲು ಬಂದಿದ್ದೇನೆ.'

'ಅವರಾರೂ ಇಲ್ಲಿಲ್ಲ. ಎಲ್ಲರೂ ಹೋದರು... ಎಲ್ಲರೂ ಹೋದರು' ಅವನು ತನ್ನ ಶೂನ್ಯವಾದ ಕಣ್ಣುಗಳನ್ನು ಆಗಂತುಕನ ಮುಖದಲ್ಲಿ ನೆಟ್ಟು ಕ್ಷೀಣವಾದ ಧ್ವನಿಯಲ್ಲಿ ಹೇಳುತ್ತಲೇ ಇದ್ದ... 'ಎಲ್ಲರೂ ಹೋದರು...'

ಡಾಕ್ಟರ್ ಆತನನ್ನು ಪಕ್ಕಕ್ಕೆ ತಳ್ಳಿ ಏಣಿ ಮೆಟ್ಟಿಲುಗಳನ್ನು ಹತ್ತಿದ. ಮೇಲೆ ವರಾಂಡದಲ್ಲಿ ಮೇಣದ ಬತ್ತಿಯನ್ನು ಹಚ್ಚಿ ಅದರ ವೃತ್ತಾಕಾರದ ಬೆಳಕಿನಲ್ಲಿ ಒಂದು ಪುಸ್ತಕವನ್ನಿಟ್ಟು ಓದುತ್ತಾ ಕುಳಿತಿದ್ದಳು ಅವನ ಪ್ರಿಯತಮೆ.

'ಸುವರ್ಣಾ, ನಾನು ಬಂದಿದ್ದೇನೆ' ಅವನು ಹೇಳಿದ. ತನ್ನ ಕಾಲುಗಳ ಓಟ ಎಂದೆಂದಿಗೂ ನಿಂತು ಹೋಗಿದೆಯೆಂದು ಅವನಿಗನ್ನಿಸಿತು.

ಅವಳು ಪುಸ್ತಕವನ್ನು ಮಡಿಚಿಟ್ಟು ಎದ್ದು ನಿಂತಳು.

'ನಾನು ಕಾಯುತ್ತಿದ್ದೆ.'

ಅವಳು ಹೇಳಿದಳು. ಅವಳ ಮುಖ ಹಳೆಯದಾದ ಬಂಗಾರದ ತಗಡಿನಂತಿತ್ತು. ದೇಹ ಸಣ್ಣಗಾಗಿ ಮೃದುವಾಗಿತ್ತು. ಅವಳು ಅವನ ಕೈಗಳನ್ನು ಹಿಡಿದುಕೊಂಡು ಅವಳ ಕೋಣೆಗೆ ಕರೆದುಕೊಂಡು ಹೋದಳು.

ಮರುದಿನ ಬೆಳಿಗ್ಗೆ ಬಹಳ ಬೇಗ ಹಾಸಿಗೆಯಿಂದ ಎದ್ದು ಕುಳಿತು ಚಂದ್ರ ಹೇಳಿದ್ದ, 'ನಾನು ನಿನ್ನನ್ನು ಮದುವೆ ಮಾಡಿಕೊಂಡು ಇಲ್ಲಿಂದ ಕರೆದುಕೊಂಡು ಹೋಗುತ್ತೇನೆ ಎಂದಾಗ ನೀನೇಕೆ ಅತ್ತೆ? ನಿನಗೇಕೆ ಅದು ಇಷ್ಟವಾಗಲಿಲ್ಲ?'

ಅವಳು ತಲೆದಿಂಬಿಗೆ ಒರಗಿ ಮಲಗಿ ನಕ್ಕಳು.

'ಏನಾದರೂ ಹೇಳು ಸುವರ್ಣಾ. ನಿನಗೆ ಈ ಮನೆ ಬಿಟ್ಟು ಬರಲು ಏಕೆ ಇಷ್ಟೊಂದು ಹಿಂಜರಿಕೆ?'

'ಈ ಮನೆಯಿಂದ ನಾನೆಂದೂ ಹೊರ ಹೋಗಲಾರೆ.'

'ಪ್ರೀತಿಗೋಸ್ಕರವಾದರೂ?'

ಅವಳು ತಲೆಯಾಡಿಸಿದಳಷ್ಟೆ.

ಅವನು ಅಂದು ತನ್ನ ಮನೆ ತಲುಪಿದಾಗ ಅಮ್ಮ ಗಾಢ ನಿದ್ರೆಯಲ್ಲಿದ್ದರು. ಆದ್ದರಿಂದ, ಅವನು ತನ್ನ ಪುನರ್ ಸಮಾಗಮವನ್ನು ರಹಸ್ಯವಾಗಿಟ್ಟ. ಅಂದು ರಾತ್ರಿಯೂ ಅವನು ಆ ಮನೆಗೆ ಹೋದ. ರಾತ್ರಿಯ ಮೊಗಸಾಲೆಗೆ ಹೋಗಿ ನಿಂತು ಅವನು ಹೇಳಿದ,

'ನಾನು ಅದೃಷ್ಟವಂತ. ನಿನ್ನಂತಹ ಸುಂದರ ಹೆಣ್ಣು ಈ ಜಗತ್ತಿನಲ್ಲಿ ಇರುತ್ತದೆಂದು ನಾನು ಕನಸಿನಲ್ಲಿಯೂ ಭಾವಿಸಿರಲಿಲ್ಲ.'